**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ,**
**ಕೆ. ಆರ್. ಪೇಟೆ.**

| | | |
|---|---|---|
| ಸಿಸಿ:ನಂಬರ್ 79/2017 | ಸಿಡಬ್ಲ್ಯೂ-1 | ಪಿ.ಡಬ್ಲ್ಯೂ-1 |

ಸಾಕ್ಷಿದಾರರ ಹೆಸರು : ರವಿ
ತಂದೆಯ ಹೆಸರು : ಮೊಗಣ್ಣಗೌಡ
ವಯಸ್ಸು : 55 ವರ್ಷ
ಉದ್ಯೋಗ : ವ್ಯವಸಾಯ
ವಾಸ ಸ್ಥಳ : ಸಾದಗೊನಹಳ್ಳಿ ಗ್ರಾಮ, ಕೆ.ಆರ್.ಪೇಟೆ ತಾಲ್ಲೂಕು.
ದಿನಾಂಕಃ 29.12.2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದೆ.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದ**

ನ್ಯಾಯಾಲಯದ ಮುಂದೆ ಇರುವ ಆರೋಪಿ ಪರಿಚಯ ನನಗೆ ಇದೆ. ದಿನಾಂಕ 07.08.2015 ರಂದು ಮಧ್ಯಾಹ್ನ 1.30 ರಿಂದ 2.00 ಗಂಟೆ ಅವದಿಯಲ್ಲಿ ಬಂಡಿಹೊಳೆ ಗ್ರಾಮದಿಂದ ಕೆ.ಆರ್.ಪೇಟೆಗೆ ಬರುತ್ತಿದ್ದೆನು. ಅಲ್ಲಿ ಅರಣ್ಯ ಇಲಾಖೆಯ ಜೀಪನ್ನು ನಿಲ್ಲಿಸಿಕೊಂಡು ಸಾಕಷ್ಟು ಜನ ನಿಂತಿದ್ದರು. ಅಲ್ಲಿ ಸರ್ವೆಯರ್, ರೈತರು ಮತ್ತು ನನ್ನ ಚಿಕ್ಕಪ್ಪ ಚಾಸಾ-2 ದೊರೆಸ್ವಾಮಿ ರವರು ಇದ್ದರು. ನಾನು ಅವರನ್ನು ನೋಡಿ ವಿಚಾರ ಮಾಡಲು ಹೋದಾಗ 1 ನೇ ಆರೋಪಿ ಹರೀಶ ವಾಹನದ ಚಾಲಕನ ಸ್ಥಳದಲ್ಲಿ ಕುಳಿತಿದ್ದರು. ಆಗ 1 ನೇ ಆರೋಪಿ ನನ್ನ ಕುತ್ತಿಗೆಗೆ ಕೈಹಾಕಿ ದಬ್ಬಿ ವಿಚಾರ ಮಾಡಲು ನೀನು ಯಾರು ಎಂದು ಹೇಳಿದರು. ಆ ಸಮಯದಲ್ಲಿ ನನ್ನ ಕುತ್ತಿಗೆಯಲ್ಲಿ ಇದ್ದ ಚೈನ್ ಸ್ಥಳದಲ್ಲಿ ಕಳೆದುಹೋಯಿತು. ಆಗ 2 ನೇ ಆರೋಪಿ ರಾಘವೇಂದ್ರ ಸ್ಥಳಕ್ಕೆ ಬಂದು ನಿನ್ನ ಮೇಲೆ ಈಗಾಗಲೇ 2 ಪ್ರಕರಣಗಳನ್ನು ಹೂಡಿದ್ದೇವೆ ಎಂದು ಹೇಳಿ ನನಗೆ ಜೀಪಿನಲ್ಲಿ ಕೂರಿಸಿ ಕೊಲೆ ಮಾಡಿ ಎಸೆಯುತ್ತೇವೆ ಎಂದು ಹೇಳಿದರು. ಅವರು ಚಿರತೆಗಳು ನಿನ್ನನ್ನು ತಿಂದು ಮುಗಿಸುತ್ತವೆ ಎಂದು ಹೇಳಿದರು. ಸ್ಥಳದಲ್ಲಿ ಇದ್ದ ನಾಗರಾಜು, ಮುರುಗೇಶ, ರಾಮಚಂದ್ರ ಮತ್ತು ಮಂಜು ರವರು ನನಗೆ ಬಿಡಿಸಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಯನ್ನು ಕೊಡಿಸಿದರು. ನಂತರ ನಾನು ಠಾಣೆಗೆ ಬಂದು ದೂರನ್ನು ದಾಖಲು ಮಾಡಿರುತ್ತೇನೆ. ನನಗೆ ಈಗ ತೋರಿಸಿದ ದಾಖಲಾತಿ ನಾನು ನೀಡಿದ ದೂರು ಆಗಿರುತ್ತದೆ. ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

ಸಂಜೆಯ ಸಮಯದಲ್ಲಿ ಸಬ್ ಇನ್ಸಪೆಕ್ಟರ್ ರವರು ನನಗೆ ಕರೆಮಾಡಿ ಮಂಟೇಲಿಂಗಯ್ಯ ರವರನ್ನು ಸ್ಥಳ ಮಹಜರ್ ಮಾಡಲು ಕಳುಹಿಸಿಕೊಟ್ಟರು. ಮಂಟೇಲಿಂಗಯ್ಯ ರವರು ಸಂಜೆ 6.00 ಗಂಟೆಯಿಂದ 6.45 ರ ವರೆಗೆ ಪಂಚನಾಮೆಯನ್ನು ಜರುಗಿಸಿ ನನ್ನ ಸಹಿಯನ್ನು ಪಡೆದುಕೊಂಡರು. ಪಂಚನಾಮೆ ಕಾಲಕ್ಕೆ ವಿಜಯಕುಮಾರ್ ಮತ್ತು ಮಧುಶ್ರೀ ರವರು ಸಹಿ ಮಾಡಿರುತ್ತಾರೆ. ಪಂಚನಾಮೆಯನ್ನು ನಿಪಿ 2 ಎಂದು ಸಾಕ್ಷಿಯ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ನನಗೆ ಹಲ್ಲೆ ಮಾಡಿದವರಾಗಿರುತ್ತಾರೆ.

**ಪಾಟೀ ಸವಾಲು :- ಆರೋಪಿ ಪರ ವಕೀಲರಿಂದಃ**

ಚಾಸಾ-. ರಿಂದ 9 ರವರು ನನ್ನ ಸ್ನೇಹಿತರು ಎಂದರೆ ಸಾಕ್ಷಿ ಅವರಲ್ಲಿ ಮುರುಗೇಶ, ರಾಮಚಂದ್ರ ಮತ್ತು

ಮಂಜು ರವರು ಮಾತ್ರ ನನ್ನ ಸ್ನೇಹಿತರು ಎಂದು ನುಡಿದಿರುತ್ತಾರೆ. ನನಗೆ ಯಾವುದೇ ಗಾಯಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಕುತ್ತಿಗೆಗೆ ಗಾಯವಾಗಿತ್ತು ಎಂದು ನುಡಿಯುತ್ತಾರೆ. ಸ್ಥಳಕ್ಕೆ ಬಂದ ಸರ್ವೆಯರ್ ಹೆಸರು ನನಗೆ ಗೊತ್ತಿಲ್ಲ. ಸ್ಥಳದಲ್ಲಿ 10 ರಿಂದ 15 ಜನರು ಇದ್ದರು. ನಾನು ಅರಣ್ಯಾಧಿಕಾರಿಗಳಿಗೆ ಪ್ರಶ್ನೆ ಮಾಡಿರುವುದಿಲ್ಲ. ನಾನು ನನ್ನ ಚಿಕ್ಕಪ್ಪನಿಗೆ ವಿಚಾರಿಸಲು ಸ್ಥಳಕ್ಕೆ ಹೋಗಿದ್ದೆನು. ನನ್ನ ಆಧಾರ್ ಕಾರ್ಡಿನಲ್ಲಿ ನನ್ನ ವಿಳಾಸ ಕೆ.ಆರ್.ಪೇಟೆ ಎಂದು ನಮೂದು ಇರುತ್ತದೆ. ಆ ಸಮಯದಲ್ಲಿ ನಾನು ಕೆ.ಆರ್.ಪೇಟೆಯಲ್ಲಿ ವಾಸವಾಗಿದ್ದೆ. ನಾನು ಆರೋಪಿಗೆ ತೊಂದರೆ ಕೊಡಲು ನಾನು ಸಾದುಗೋನಹಳ್ಳಿಯಲ್ಲಿ ವಾಸವಾಗಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯಲಿ ಚೆಕ್ಕುಬಂದಿಯನ್ನು ಬರೆದುಕೊಂಡಿರುತ್ತಾರೆ. ಅದರಲ್ಲಿ ಬರೆದಿರುವ ಒಕ್ಕಣಿಕೆ ನನಗೆ ತಿಳಿದಿದೆ. ಪಂಚರನ್ನು ಪೊಲೀಸರು ಕರೆಸಿದರು. ನನ್ನ ಚಿಕ್ಕಪ್ಪ ದೊರೆಸ್ವಾಮಿ ಚೆನ್ನರಾಯಪಟ್ಟಣದಲ್ಲಿ ವಾಸವಾಗಿದ್ದಾರೆ. ಅವರು ಸ್ಥಳದಲ್ಲಿ ಹಾಜರಾಗದೇ ಇದ್ದರೂ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರಾದ ಚಾಸಾ 3 ರಿಂದ 7 ರವರು ಸ್ಥಳದಲ್ಲಿ ಹಾಜರಿದ್ದರು ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಅಡ್ಡಗಟ್ಟಿ ಹಲ್ಲೆ ಮಾಡಿ ಪ್ರಾಣ ಬೆದರಿಕೆ ಹಾಕಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ನನಗೆ ಮುರುಗೇಶ, ನಾಗರಾಜು ಮತ್ತು ಮಂಜುರವರು ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ. ಯಾವುದೇ ಘಟನೆ ನಡೆಯದೆ ಇದ್ದರೂ ಕೂಡಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರಣ್ಯ ಇಲಾಖೆ ವತಿಯಿಂದ ನನ್ನ ಮೇಲೆ 4-5 ಪ್ರಕರಣಗಳನ್ನು ಹೂಡಿರುತ್ತಾರೆ. ನಾನು ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿದ್ದೇನೆ ಎಂದು ಅರಣ್ಯ ಇಲಾಖೆಯಿಂದ ನನ್ನ ವಿರುದ್ದ ಪ್ರಕರಣವನ್ನು ಹೂಡಿದ್ದಾರೆ ಎಂದರೆ ಸರಿಯಲ್ಲ. ಈ ಘಟನೆಗೆ ಸಂಬಂಧಪಟ್ಟಂತೆ ಆರೋಪಿತರು ನನ್ನ ವಿರುದ್ದ ಕೂಡಾ ಪ್ರಕರಣ ದಾಖಲು ಮಾಡಿದ್ದಾರೆ. ಆರೋಪಿತರು ನನ್ನ ವಿರುದ್ದ ಪ್ರಕರಣ ದಾಖಲು ಮಾಡಿದ ನಂತರ ನಾನು ಅವರುಗಳ ವಿರುದ್ದ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ** ಃ ಇಲ್ಲಾ .

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

(ಶಮೀರ್.ಪಿ.ನಂದ್ಯಾಲ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.